

# ಪಿತ್ತಜನಕಾಂಗ ಕಸಿ ವರದಾನ

ಕಣ್ಣು, ಕಿಡ್ನಿಗಳ ಕಸಿ ನಡೆಸುವಂತೆಯೇ ಈಗೀಗ ಪಿತ್ತಜನಕಾಂಗ (ಯಕೃತ್) ಕಸಿ ಕೂಡ ಜನಪ್ರಿಯವಾಗುತ್ತಿದೆ. ಲಿವರ್ ತೀವ್ರವಾಗಿ ಹಾನಿಗೊಳಗಾದಾಗ ಇದನ್ನು ಶಸ್ತ್ರಚಿಕಿತ್ಸೆ ಮೂಲಕ ಕಸಿ ಮಾಡಿ ಸರಿಪಡಿಸುವುದೊಂದೇ ದಾರಿ. ಸಂಬಂಧಿಗಳಿಂದ ಅಥವಾ ದಾನಿಗಳಿಂದ ಪಡೆದ ಲಿವರ್ ಅನ್ನು ಅವಶ್ಯ ಇರುವ ರೋಗಿಯ ಯಕೃತ್‌ಗೆ ಕಸಿ ಮಾಡಿದರೆ ಆತನ ಆರೋಗ್ಯ ಮೊದಲಿನಂತಾಗಲು ಸಾಧ್ಯ. ಒಮ್ಮೆ ಪಿತ್ತಜನಕಾಂಗದ ಭಾಗವನ್ನು ದಾನ ಮಾಡಿದರೂ ಮತ್ತೆ ಅದು ತಾನಾಗೇ ಬೆಳೆಯುವ ವಿಶಿಷ್ಟ ಗುಣ ಹೊಂದಿರುವ ಅಂಗ ಇದು.

■ **ಉಮಾ ಅನಂತ್**

**ಕೋ**ಲಾರದ ಇಪ್ಪತ್ತೆಂಟು ವರ್ಷದ ಪ್ರದೀಪ್‌ಗೆ ಮೂತ್ರಪಿಂಡದಲ್ಲಿ ಸೋಂಕು ತಗುಲಿತ್ತು. ಇದಕ್ಕಾಗಿ ಸುಮಾರು ಆರುತಿಂಗಳ ಕಾಲ ಔಷಧಿ ಸೇವಿಸಿದರು. ಬಳಿಕ ಆರಂಭವಾದದ್ದು ಕ್ಷಯರೋಗ. ಇದಕ್ಕೆ ನೀಡಿದ ಆ್ಯಂಟಿಬಯಾಟಿಕ್ ವ್ಯತಿರಿಕ್ತ ಪರಿಣಾಮ ಬೀರಿತ್ತು. ಪ್ರದೀಪ್ ಕೋಮಾಕ್ಕೆ ಹೋಗಿದ್ದರು. ತೂಕವೂ ಬಹಳ ಕಡಿಮೆಯಾಗಿ ಪಿತ್ತಜನಕಾಂಗಕ್ಕೆ ವಿಪರೀತ ಹಾನಿಯಾಗಿತ್ತು. ಪಿತ್ತಜನಕಾಂಗ (ಲಿವರ್) ಕಸಿ ಮಾಡದೆ ಬೇರೆ ವಿಧಿಯೇ ಇರಲಿಲ್ಲ. ತನ್ನ ಸಹೋದರಿ ನೀಡಿದ ಪಿತ್ತಜನಕಾಂಗ ಭಾಗದ ದಾನ ಪಡೆದು ಕಸಿ ಮಾಡಿಸಿಕೊಂಡದ್ದರಿಂದ ಪ್ರದೀಪ್ ಆರೋಗ್ಯ ಮೊದಲಿನಂತಾಗಿದೆ. ಕೆಲಸಕ್ಕೂ ಹೋಗುತ್ತಿದ್ದಾರೆ. ಪ್ರದೀಪ್‌ಗೆ ಈ ಚಿಕಿತ್ಸೆಗೆ ತಗಲಿದ ವೆಚ್ಚ 43 ಲಕ್ಷ ರೂಪಾಯಿ.

***

ನಲವತ್ತಾರು ವರ್ಷದ ತುಮಕೂರಿನ ಪ್ರೇಮಾಗೆ ಕಾಮಾಲೆ ಬಂದು ತೀವ್ರ ಸ್ವರೂಪ ತಾಳಿತ್ತು. ಇದರಿಂದ ತೂಕ ವಿಪರೀತ ಹೆಚ್ಚಾಗಿ ಉಸಿರಾಟದ ಸಮಸ್ಯೆಯೂ ಎದುರಾಯಿತು. ಇದರಿಂದ ಪ್ರೇಮಾ ಕೋಮಾಗೆ ತಲುಪಿದರು. ಅಲ್ಲದೆ ಇವರ ಪಿತ್ತಜನಕಾಂಗಕ್ಕೂ ತೀವ್ರ ಹಾನಿಯಾಗಿತ್ತು. ಯಕೃತ್ ಕಸಿ ಒಂದೇ